ಡಾ॥ ಹೆಚ್. ಎಲ್. ತಿಮ್ಮೇಗೌಡ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಚಿಕ್ಕಪುಗಳೂರಿನಲ್ಲಿ ಜನರಲ್ ಆಸ್ಪತ್ರೆಯು ಕಟ್ಟಡವನ್ನು ಕಟ್ಟಲು, ಸರ್ಕಾರಿ ಆಜ್ಞೆ ಸಂಖ್ಯೆ ಹೆಚ್.ಎಫ್.ಡಬ್ಲ್ಯು, ೧೪ ಬಿಆರ್ಎ ೮೨, ದಿನಾಂಕ ೨೪-೩-೮೪ ರಂದು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಈ ಕಟ್ಟಡದ ಕೆಲಸವನ್ನು ಸುಪಾರು ಮೂರು ವರ್ಷಗಳಲ್ಲಿ ಮುಗಿಸುವ ನಿರೀಕ್ಷೆಯಿದೆ.

ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯ ಮಲಿನ ನೀರು

೨೯೪ (೬೦೬) ಶ್ರೀ ಜಿ. ಪಾದೇಗೌಡ (ಕೆರುಗಾವಲು).—ಪಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :

ಅ) ಮೈಸೂರು ಸಕ್ಕರೆ ಕಾರ್ಖಾನೆಯ ಹೊರಬಿಡುತ್ತಿರುವ ಕಲುಷಿತ ನೀರು ಹೆಬ್ಬಳ ನಾಲೆಗೆ ಸೇರಿ, ಜನ ಮತ್ತು ದನಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ರಾಮಕೃಷ್ಣ ಹೆಗ್ಗಡೆ (ಪಾನ್ಯ ಮುಖ್ಯ ಮಂತ್ರಿಗಳು).

ಅ) ಬಂದಿದೆ.

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯು, ಮಂಡ್ಯದ ಬಳಿ ಸ್ಥಾಪಿತವಾಗಿರುವ ಮೈಸೂರು ಸಕ್ಕರೆ ಕಾರ್ಖಾನೆಯಿಂದ ಹೊರಬರುವ ಕಲುಷಿತ ನೀರನ್ನು ಶುದ್ಧೀಕರಿಸಲು ಬೇಕಾದ ಸಂಸ್ಕರಣ ಘಟಕಗಳನ್ನು ಅಳವಡಿಸದಿದುರಿಂದ, ಜಲ (ಮಾಲಿನ್ಯ ನಿಯಂತ್ರಣ) ಕಾಯಿದೆ ೧೯೭೪ರ ನಿಯಮದಂತೆ ಬೆಂಗಳೂರಿನ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ೨೩-೩-೮೫ ರಂದು ಮೊಕದ್ದಮೆಯನ್ನು ಹೂಡಿದ್ದು ನ್ಯಾಯಾಲಯದ ಆಜ್ಞೆಯನ್ನು ನಿರೀಕ್ಷಿಸಲಾಗುತ್ತಿದೆ.

ಕನ್ನಡ ಚಿತ್ರಗಳಿಗೆ ಮನರಂಜನೆ ತೆರಿಗೆ ವಿನಾಯಿತಿ

೩೦೧(೮೫೬) ಶ್ರೀ ಜಿ. ನಾರಾಯಣಕುಮಾರ್ (ಬಿನ್ನಿಪೇಟೆ).—ಪಾನ್ಯ ವಾರ್ತಾ, ಯುವಜನ ಸೇವೆ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಹೊರನಾಡಿನಲ್ಲಿ ತಯಾರಾದ ಕನ್ನಡ ಚಲನ ಚಿತ್ರಗಳಿಗೆ ಯಾವ ಆಧಾರದ ಮೇಲೆ ಶೇಕಡ ೫೦ ತೆರಿಗೆ ವಿನಾಯಿತಿಯನ್ನು ನೀಡಲಾಗಿದೆ ?

ಆ) ಈ ರಿಯಾಯಿತಿಯನ್ನು ಸರಕಾರವು ತೆಗೆದು ಹಾಕಲು ಆಲೋಚಿಸುವುದೇ ?

ಡಾ॥ ಜೀವರಾಜ ಆಳ್ವ (ಪ್ರವಾಸೋದ್ಯಮ, ಯುವಜನ ಸೇವಾ ಇಲಾಖೆಯ ರಾಜ್ಯ ಮಂತ್ರಿಗಳು).—

ಅ) ಕನ್ನಡ ಚಲನಚಿತ್ರ ರಂಗದ ಸರ್ವತೋಮುಖ ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರವು ಎಲ್ಲಾ ಕನ್ನಡ ಚಲನ ಚಿತ್ರಗಳಿಗೂ ಶೇಕಡಾ ೫೦ ಮನರಂಜನೆ ತೆರಿಗೆ ವಿನಾಯಿತಿಯನ್ನು ನೀಡುತ್ತಿದೆ.

ಆ) ಹೌದು, ಆಲೋಚಿಸಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎಂ. ರಘುಪತಿ.—ಪಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಹದಿನಾರನೆಯ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದೆ ಇಡಲಾಯಿತು.